## ಸಂಪಾದಕೀಯ



### ಸಾಂಬಾರಿನಲ್ಲಿ ಸಕ್ಕರೆ ಅಂಶ...!

ಇಪ್ಪತ್ತೊಂದನೆಯ ಶತಮಾನದಲ್ಲಿ "ಮಧುಮೇಹಿಗಳ ಯುಗ" ಎಂದೇ ಕರೆಯಬಹುದೇನೋ! ಹಳ್ಳಿ, ಪಟ್ಟಣ, ನಗರ ಮತ್ತು ಮಹಾನಗರಗಳಲ್ಲಿ ಇಂದು ಎಲ್ಲಿ ಕಂಡರೂ 'ಶುಗರ್ ಪ್ರಾಬ್ಲಮ್' ಇರುವವರೇ ಹೆಚ್ಚು ಜನರಿದ್ದಾರೆ ! ಕುಳಿತು ಕೆಲಸ ಮಾಡುವವರಿಗೆ ತೀರಾ ಸಾಮಾನ್ಯ. ಸಮಾಜದ ಎಲ್ಲಾ ಸ್ತರಗಳ ಜನರಲ್ಲೂ 'ಸಕ್ಕರೆ ಕಾಯಿಲೆ' ಕಾಣಿಸಿಕೊಂಡಿರುವ ದಿನಮಾನಗಳಿವು! ವಿಶೇಷವೆಂದರೆ, ಸಾಕಷ್ಟು ಕೆಲಸ ಮಾಡುವ, ನಡೆದಾಡುವ ಕೃಷಿಕರನ್ನೂ ಹಳ್ಳಿಗಳ ನಿವಾಸಿಗಳನ್ನೂ ಇಂದು 'ಸಕ್ಕರೆ ಕಾಯಿಲೆ' ಅಪ್ಪಿಕೊಂಡಿದೆ; ಅಂತಹ ಬಹುಪಾಲು ಜನರು ಗುಳಿಗೆ ನುಂಗುತ್ತಾ ಆ ಕಾಯಿಲೆಯನ್ನು ಒಪ್ಪಿಕೊಂಡಿದ್ದಾರೆ!

ಇರಲಿ, ಡಯಾಬಿಟೀಸ್ ಇರುವವರು ಸಕ್ಕರೆ, ಬೆಲ್ಲ ತಿನ್ನಬಾರದು ಎಂಬುದು ಬಹುಮುಖ್ಯ ಪಥ್ಯ. ಸಕ್ಕರೆ ಬೆಲ್ಲ ಎರಡೂ ಒಂದೇ ಬಿಡಿ. ಬೆಲ್ಲ ಉತ್ತಮ ಎಂಬುದು ಸಣ್ಣ ಭ್ರಮೆ! ಇಂದು ಎಷ್ಟೋ ಕಡೆ ಸಕ್ಕರೆಯಿಂದಲೇ ಬೆಲ್ಲ ತಯಾರಿಸುವುದುಂಟು! ಆದ್ದರಿಂದ 'ಶುಗರ್‌ಲೆಸ್ ಕಾಫಿ' ಇಂದು ಎಲ್ಲೆಡೆ ತೀರಾ ಸಾಮಾನ್ಯ. ನನ್ನ ರೀತಿ ತಲೆಕೂದಲು ಹಣ್ಣಾದವರು, ಯಾರದ್ದಾದರೂ ಮನೆಗೆ ಹೋದಾಗ 'ಸಕ್ಕರೆ ಹಾಕಿದ ಕಾಫಿ ಪರವಾಗಿಲ್ವೆ?' ಎಂದು ಸೌಜನ್ಯದಿಂದ ವಿಚಾರಿಸುತ್ತಾರೆ; ಏಕೆಂದರೆ, ಬಿಳಿ ಕೂದಲಿನವರಿಗೆ, ಅಂದರೆ ಅಷ್ಟು ವಯಸ್ಸಾದವರಿಗೆ, 'ಸಕ್ಕರೆ ಸಮಸ್ಯೆ' ಇದ್ದೇ ಇರಬಹುದೆಂಬ ತಿಳಿವಳಿಕೆ ಇಂದು ಸಾರ್ವತ್ರಿಕವಾಗಿಬಿಟ್ಟಿದೆ! ಡಯಾಬಿಟಿಸ್ ಇರುವ ಬಹುಪಾಲು ಮಂದಿ, 'ಗಂಭೀರ ವ್ರತ' ಹಿಡಿದವರಂತೆ, ಸಕ್ಕರೆ ರಹಿತ ಕಾಫಿ, ಚಹ ಕುಡಿಯುವುದು ಸಾಮಾನ್ಯ. ಆದರೆ ಅಂತಹ ಸಜ್ಜನರ ಸಕ್ಕರೆ ರಹಿತ ವ್ರತವನ್ನು ಭಂಗ ಮಾಡುವ ನಾನಾ ವಿದ್ಯಮಾನಗಳೂ ನಮ್ಮಲ್ಲಿ ಇಂದು ಸದ್ದಿಲ್ಲದೇ ನಡೆಯುತ್ತಿವೆ, ಗೊತ್ತಾ! ಅವರಿಗೆ ಗೊತ್ತಿಲ್ಲದಂತೆ ಸಾಕಷ್ಟು ಸಕ್ಕರೆಯ, ಬೆಲ್ಲದ ಅಂಶವು ಆಹಾರದ ಮೂಲಕ ಅವರ ದೇಹ ಸೇರಿರುತ್ತದೆ! ಹೇಗೆ ಎಂದಿರಾ?


- ಯಾವುದೆ ಉಡುಪಿ ಹೋಟೇಲ್ ಅಥವಾ ದರ್ಶಿನಿಗೆ ಹೋಗಿ ಊಟ ಮಾಡಿದರೆ, ಸಾಂಬಾರಿಗೆ ಧಾರಾಳವಾಗಿ ಹಾಕಿದ ಬೆಲ್ಲ ಸೇವನೆಯಾಗುತ್ತದೆ!
- ಇಡ್ಲಿ–ಸಾಂಬಾರ್ ಸಾಕಷ್ಟು ಸುರಕ್ಷಿತ ಉಪಾಹಾರ ಎಂದು ಪಟ್ಟಾಗಿ ಸೇವಿಸಿದಾಗ, ಸಾಂಬಾರ್‌ಗೆ ಬೆರೆಸುವ ಬೆಲ್ಲ ಚೆನ್ನಾಗಿ ದೇಹದೊಳಗೆ ಸೇರುತ್ತದೆ!
- ಉಪ್ಪಿಟ್ಟು, ಪಲ್ಯ, ಬಿಸಿಬೇಳೆ ಬಾತ್, ಚಿತ್ರಾನ್ನ , ಮಸಾಲೆ ದೋಸೆ–ಎಲ್ಲಕ್ಕೂ ಸ್ವಲ್ಪ ಸಕ್ಕರೆ ಅಥವಾ ಬೆಲ್ಲ ಬೆರೆಸುವ ಪದ್ಧತಿ ಹೆಚ್ಚಿನ ಹೋಟೆಲ್‌ಗಳಲ್ಲಿ, ಮದುವೆಯ ವಿಶೇಷ ಊಟಗಳಲ್ಲಿ ತೀರಾ ಸಾಮಾನ್ಯ.
- ಮಲೆನಾಡು, ಕರಾವಳಿಯ ಅಡುಗೆಯಲ್ಲಿ ಸಾಂಬಾರು, ಸಾರು, ಸಾಸಿವೆ, ಗೊಜ್ಜು, ಮುದ್ದುಳಿ, ಕಾಯಿರಸ ಮೊದಲಾದ ಯಾವುದು ಸಕ್ಕರೆ ರಹಿತ ಎಂದು ಮೇಲ್ನೋಟಕ್ಕೆ ಕಾಣಿಸುತ್ತದೋ, ಅವೆಲ್ಲಕ್ಕೂ ಬೆಲ್ಲ, ಸಕ್ಕರೆ ಧಾರಾಳ ಉಪಯೋಗವಿದೆ!

ಆದ್ದರಿಂದ ಸಕ್ಕರೆ ರಹಿತ ಕಾಫಿ ವೃತ್ತ ಹಿಡಿದಿರುವ ಸಜ್ಜನರೇ, ಗಮನಿಸಿ, ನೀವು ಯಾವುದೇ ಹೋಟೆಲ್‌ಗಳಲ್ಲಿ, ಮದುವೆಯ ಮನೆ ಊಟದಲ್ಲಿ ಅಥವಾ ವಿಶೇಷ ಔತಣಗಳಲ್ಲಿ ಸೇವಿಸುವ ಸಾಂಬಾರು, ತಿಳಿಸಾರು, ಗೊಜ್ಜು, ಉಪ್ಪಿಟ್ಟು ಮೊದಲಾದ ತಿನಿಸುಗಳ ಮೂಲಕ 5 ರಿಂದ 10 ಗ್ರಾಂ ಸಕ್ಕರೆ, ಬೆಲ್ಲ ಸೇವಿಸುತ್ತಿದ್ದೀರಿ! ಕೆಲವರ ಮನೆಗಳಲ್ಲೂ ಸಾಂಬಾರು, ಸಾರಿಗೆ ಬೆಲ್ಲ ಸೇರಿಸುವ ಪದ್ಧತಿಯಿದ್ದು, ಅದು 'ಮಧುಮೇಹಿಗಳ ವ್ರತ' ಹಾಳು ಮಾಡುತ್ತಿದೆ!

ನಾನು ಹೇಳಿದ ಮೇಲ್ಕಂಡ ವಿಚಾರ ಸರಿಯೇ? ತಪ್ಪೇ?


• **ರೊ. ಎಂ. ಮಾಧವಾಚಾರ್**

**SEP**




### 3. Basic Education and Literacy Month

- Initiate E- learning and Happy School projects
- Conduct Adult Literacy programs - Involve youngsters and college students.
- Distribute books (especially Value Based educational books) to school libraries and encourage reading habit.
- Focus on new ideas like training Primary and Preprimary teachers to include and involve special children and children with learning disorders.
- Plan programs with the Education Department in promoting literacy.




### Happy Birthday Wishes



*Chandrappa N.*
*13th Sept*






*Neethu A.S.*
*16th Sep*

To, *Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495

SERVICE ABOVE SELF



2025-26

Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –10 ದಿನಾಂಕ : 10–09–2025

## ದಿನಾಂಕ: 10.09.2025ರ ವಾರದ ಸಭೆ

**ಶಿಕ್ಷಕರ ದಿನಾಚರಣೆ ಪ್ರಯುಕ್ತ ಶಿಕ್ಷಕರಾದ ಶ್ರೀ ಬಿ.ಕೆ.ವೆಂಕಟೇಶ ಮೂರ್ತಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕಾರ್ಯಕ್ರಮ. ಜೊತೆಗೆ ಕ್ಲಬ್‌ನಲ್ಲಿನ ಶಿಕ್ಷಕ ವೃತ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಅಭಿನಂದನೆ ಮತ್ತು ನಮ್ಮ ಕ್ಲಬ್‌ನಿಂದ ಪ್ರಾಯೋಜಿಸಲ್ಪಟ್ಟ ಇಂಟರಾಕ್ಟ್ ಕ್ಲಬ್‌ನ ಕೋ–ಆರ್ಡಿನೇಟರ್ ಶಿಕ್ಷಕರುಗಳಿಗೆ ಗೌರವಾರ್ಪಣೆ ಕಾರ್ಯಕ್ರಮ ಏರ್ಪಾಡಾಗಿತ್ತು. ಮುಖ್ಯ ಅತಿಥಿಗಳೊಂದಿಗೆ ವೇದಿಕೆಯಲ್ಲಿ ಅಧ್ಯಕ್ಷರಾದ ರೊ.ಆರ್.ಆನಂದ್ ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಉಪಸ್ಥಿತರಿದ್ದು ಕಾರ್ಯಕ್ರಮ ಚೆನ್ನಾಗಿ ಮೂಡಿ ಬಂದಿತು.**





ರೊ.ಕಿಶೋರ್ ಶೀರ್ನಾಳಿಯವರ ಸುಶ್ರಾವ್ಯಗಾಯನ "ನಮ್ಮಮ್ಮ ಶಾರದೆ ಉಮಾ ಮಹೇಶ್ವರಿ ನಿಮ್ಮೊಳಗಿಹನಾರಾಮ್ಮ" ಗೀತೆಯ ಪ್ರಾರ್ಥನೆಯೊಂದಿಗೆ ಸಭಾರಂಭ. ರೊ. ಎ. ಮಂಜುನಾಥರವರಿಂದ ಸ್ವಾಗತವಾಯಿತು. ನಂತರ ಕ್ಲಾಸಿಫಿಕೇಷನ್ ಟಾಕ್ ನೂತನ ಸದಸ್ಯರಾದ ರೊ.ವಿ. ಶ್ರೀನಿವಾಸ್‌ರವರಿಂದ ಅವರು ಮಾತನಾಡುತ್ತಾ ತಮ್ಮ ಸೇವಾ ಕ್ಷೇತ್ರವಾದ ಎಲ್.ಐ.ಸಿ.ಯಲ್ಲಿ ಸುಮಾರು 35 ವರ್ಷಗಳ ಸೇವೆ ಸಲ್ಲಿಸಿರುತ್ತೇನೆ. ನನ್ನ ಧರ್ಮಪತ್ನಿ ಶ್ರೀಮತಿ ನಾಗರತ್ನ ಅವರೂ ಕೂಡ ಎಲ್.ಐ.ಸಿ.ಯಲ್ಲಿ ಸೇವೆ ಸಲ್ಲಿಸಿದ್ದಾರೆ. ಇಬ್ಬರು ಗಂಡು ಮಕ್ಕಳು ಅಮೇರಿಕಾದಲ್ಲಿ ವೃತ್ತಿ ನಿಮಿತ್ತ ನೆಲೆಸಿದ್ದಾರೆ. ಓದು, ರಸ ಪ್ರಶ್ನೆ ಕಾರ್ಯಕ್ರಮ ನಡೆಸಿಕೊಡುವುದು, ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವುದು ನನ್ನ ಹವ್ಯಾಸವಾಗಿರುತ್ತದೆ. ರೊ.ಕೆ. ಸೂರ್ಯನಾರಾಯಣ ಉಡುಪರ ಅಧ್ಯಕ್ಷಾವಧಿಯಲ್ಲಿ ಕ್ಲಬ್‌ಗೆ ಸೇರಿದ್ದೇನೆ ಎಂದು ತಿಳಿಸಿ, ಶುಕ್ರವಾರ 12.09.2025 ರಂದು ನಮ್ಮ ಮನೆಯ ಮೇಲ್ಗಡೆ ಸುಗಮ ಸಂಗೀತದ ಕಾರ್ಯಕ್ರಮವಿದೆ ಎಲ್ಲರೂ ಬನ್ನಿ ಎಂದು ಆಹ್ವಾನಿಸಿದರು.

ರೊ. ಕೆ. ಸೂರ್ಯನಾರಾಯಣ ಉಡುಪ ಮತ್ತು ರೊ. ಎನ್.ಜಿ. ಉಷಾ ದಂಪತಿಗಳು ವೇದಿಕೆಗೆ ಆಗಮಿಸಿ, ನಮ್ಮ ಕ್ಲಬ್‌ಗೆ 21 ಅವಾರ್ಡ್‌ಗಳು ಬಂದಿದ್ದು, ಶಿವಮೊಗ್ಗ ವಲಯದಲ್ಲಿ ಎರಡನೇ ಸ್ಥಾನ ದೊರಕಿದೆ. ಅಲ್ಲದೇ ಕ್ಲಬ್ ಎಕ್ಸಲೆನ್ಸ್ ಅವಾರ್ಡ್ ಕೂಡ ದೊರಕಿದೆ ಎಂದು ಮಾಹಿತಿ ನೀಡಿದರು. ಇದಕ್ಕೆಲ್ಲಾ ನಿಮ್ಮಗಳೆಲ್ಲರ ಸಹಕಾರ, ಬೆಂಬಲ, ಉತ್ತೇಜನ ಬಹಳ ಮುಖ್ಯ ಅದು ದೊರಕಿದುದರಿಂದಲೇ ಇಷ್ಟೆಲ್ಲಾ ಸೇವೆ ಮಾಡಲು ಸಾಧ್ಯವಾಯಿತು. ರೊ.ಪಿಡಿಜಿ. ಡಾ.ಪಿ.ನಾರಾಯಣ, ರೊ.ಎನ್.ಜಿ.ಉಷಾ, ರೊ.ಲಕ್ಷ್ಮೀನಾರಾಯಣ ಭಟ್‌ರವರ ಸಹಕಾರ ಮನನೀಯ ಎಂದರು. ಸದಸ್ಯತ್ವ ಅಭಿವೃದ್ಧಿಯಲ್ಲಿ ದ್ವಿತೀಯ, ರೋಟರಿ ಫೌಂಡೇಷನ್ ದೇಣಿಗೆ ನೀಡುವಿಕೆಗೆ ದ್ವಿತೀಯ ಬಹುಮಾನ ಬಂದಿದೆ ಎಂದರು. ರೊ. ಎಸ್.ಮಂಜುನಾಥ್, ರೊ. ಹೇಮಾವತಿ, ರೊ.ಎನ್.ಜಿ. ಉಷಾ, ರೊ.ಕೆ. ಸೂರ್ಯನಾರಾಯಣ ಉಡುಪರವರು ವೇದಿಕೆಯಲ್ಲಿದ್ದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆ ಮತ್ತು ಹುಟ್ಟು ಹಬ್ಬದ ಶುಭಾಶಯಗಳನ್ನು ಪ್ರಕಟಿಸಿದರು.

**ಶಿಕ್ಷಕರಿಗೆ ಅಭಿನಂದನೆ** : ರೊ. ಕೆ. ಸೂರ್ಯನಾರಾಯಣ ಉಡುಪರು ಮಾತನಾಡಿ, ಮಾಜಿ ರಾಷ್ಟ್ರಪತಿ ರಾಧಾಕೃಷ್ಣನ್‌ರವರ ಜನ್ಮ ದಿನ. ಆ ಪ್ರಯುಕ್ತ ಶಿಕ್ಷಕರ ದಿನಾಚರಣೆ ಆಚರಣೆಯಲ್ಲಿ ಇಂದು ಈ

### ಈ ವಾರದ ಸಭೆ

**ದಿನಾಂಕ: 17–09–2025, ಬುಧವಾರ** **ಸಂಜೆ 6:30**

**ಅತಿಥಿಗಳು :**

**ವಿದ್ವಾನ್ ಡಾ. ಎಸ್. ಆರ್. ನಾಗರಾಜ್ ಮತ್ತು ವಿದುಷಿ ಶ್ರೀಮತಿ ವೀಣಾ ಮತ್ತು ತಂಡ**

**ವಿಷಯ:**

**ಕರ್ನಾಟಕ ಸಂಗೀತದಲ್ಲಿ ಶಿಕ್ಷಣದ ಹಂತಗಳು**

ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ













ಅಭಿನಂದನೆ ಎನ್ನುತ್ತಾ, ನಮ್ಮ ಕ್ಲಬ್‌ನ ಈ ಕೆಳಕಂಡ ಶಿಕ್ಷಕ ವೃತ್ತಿಯ ಸದಸ್ಯರುಗಳನ್ನು ವೇದಿಕೆಗೆ ಆಹ್ವಾನಿಸಿದರು. ರೊ.ಎನ್.ಜಿ. ಉಷಾ, ರೊ. ನೀತು ದೀಪಕ್, ಮತ್ತು ರೊ. ನಿರ್ಮಲಾ ಶಿವಾನಂದರವರು ವೇದಿಕೆಗೆ ಆಗಮಿಸಿ, ರೊ.ಸುನೀತಾ ಶ್ರೀಧರ್, ರೊ.ಮಲ್ಲಿಕಾ ವಿ.ಜೋಯ್ಸ್, ರೊ. ರಮಾ ಗೋಪಾಲ್‌ರವರಿಂದ ಸನ್ಮಾನ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ನಮ್ಮ ಇಂಟರಾಕ್ಟ್ ಕೋ ಆರ್ಡಿನೇಟರ್ ಶಿಕ್ಷಕರುಗಳಾದ ಗಾಜನೂರು ಕರ್ನಾಟಕ ಪಬ್ಲಿಕ್ ಸ್ಕೂಲ್‌ನ ಶ್ರೀ ಎಂ.ಎಸ್. ನಾಗರಾಜ್, ಶಿವಮೊಗ್ಗ ನ್ಯಾಶನಲ್ ಹೈಸ್ಕೂಲ್‌ನ ಶ್ರೀ ಪೆಂಚಾಲಯ್ಯ ಮತ್ತು ಬಿ.ಆರ್. ಪ್ರಾಜೆಕ್ಟ್‌ನ ನ್ಯಾಶನಲ್ ಹೈಸ್ಕೂಲ್‌ನ ಶ್ರೀರಘುರವರುಗಳನ್ನು ವೇದಿಕೆಗೆ ಆಹ್ವಾನಿಸಿ, ಮುಖ್ಯ ಅತಿಥಿ ಶ್ರೀ ಬಿ.ಕೆ. ವೆಂಕಟೇಶಮೂರ್ತಿ ಮತ್ತು ಇಂಟರಾಕ್ಟ್ ಸಮಿತಿ ಚೇರ್ಮನ್ ರೊ.ಎನ್.ಎಸ್. ಶ್ರೀಧರ್‌ರವರು ಜೊತೆಗೂಡಿ ಸನ್ಮಾನಿಸಲಾಯಿತು. ರೊ.ಟಿ.ಕೆ.ಮಹಾಬಲೇಶ್ವರ ಭಟ್‌ರವರು ಮುಖ್ಯ ಅತಿಥಿಗಳನ್ನು ಆತ್ಮೀಯವಾಗಿ ಸಭೆಗೆ ಪರಿಚಯ ಮಾಡಿಕೊಟ್ಟರು.

ಮುಖ್ಯ ಅತಿಥಿಗಳಾದ ಶ್ರೀ ಬಿ.ಕೆ.ವೆಂಕಟೇಶಮೂರ್ತಿಯವರು – 'ಭವಿಷ್ಯ ಭಾರತದ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ' ಎಂಬ ವಿಚಾರವಾಗಿ ಸವಿಸ್ತಾರವಾಗಿ ಮಾತನಾಡಿದರು. ಪ್ರಾರಂಭದಲ್ಲಿ ಶಿಕ್ಷಕರ ದಿನಾಚರಣೆಯ ಶುಭಕಾಮನೆಗಳನ್ನು ತಿಳಿಸುತ್ತಾ, ಈ ಕಾರ್ಯಕ್ರಮಕ್ಕೆ ಸಂತೋಷದಿಂದಲೇ ಒಪ್ಪಿ ಬಂದಿದ್ದೇನೆ, ಏಕೆಂದರೆ ತಾನೊಬ್ಬ ಶಿಕ್ಷಕನಾಗಿರುವುದರಿಂದ. ಪ್ರಥಮಥಃ ಅವರು ಇಂದಿನ ಶಿಕ್ಷಣ, ಶಿಕ್ಷಕರು ಬಗ್ಗೆ ತಿಳಿಸುತ್ತಾ, ಭಾರತ ಒಂದು ಅತ್ಯಂತ ಶ್ರೇಷ್ಟ, ಜ್ಞಾನ ಸಂಸ್ಕೃತಿ ಹಾಗೂ ಮಾನವೀಯ ಮೌಲ್ಯಗಳನ್ನು ಹೊಂದಿರುವ ದೇಶ. ವೇದ ಉಪನಿಷತ್ತುಗಳು ಜ್ಞಾನ ಪ್ರಸಾರದ ಪ್ರಯಾಣದ ಮುಂದುವರೆದ ಭಾಗವೇ ಶಿಕ್ಷಣವಾಗಿದೆ. ಇದಕ್ಕೆಲ್ಲಾ ಶಿಕ್ಷಕರು, ಗುರುಗಳು, ಅಧ್ಯಾಪಕರು ಏನೆಲ್ಲಾ ಕರೆಯುತ್ತೇವೋ ಅವರು ಇದಕ್ಕೆ ಮುಖ್ಯರು. ಜೀವನಕ್ಕೆ ಸಂಬಂಧಿಸಿದಂತೆ, ತಾಯಿ ಗುರುವಾಗಿರುತ್ತಾಳೆ. ಜ್ಞಾನ ಪಸರಿಸಲು ಶಿಕ್ಷಕರು ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ ಎಂದರು.

ಶ್ರೀಕೃಷ್ಣ ಉತ್ತಮೋತ್ತಮನಾದ ಶಿಕ್ಷಕ. ಸಾಂದೀಪನಿ ಋಷಿಗಳು ಅವನ ಗುರುಗಳಾದರೂ, ಅವನು ಜಗದ್ಗುರು. ರಾಮಕೃಷ್ಣ ಪರಮಹಂಸರಂತಹ, ಸ್ವಾಮಿ ವಿವೇಕಾನಂದರಂತಹ ದಾರ್ಶನಿಕರು ಆಗಿಹೋಗಿದ್ದಾರೆ. ಡಾ. ಎಸ್. ರಾಧಾಕೃಷ್ಣನ್‌ರವರು ಶ್ರೇಷ್ಟ, ಅದ್ಭುತ, ದಾರ್ಶನಿಕ ತತ್ವಶಾಸ್ತ್ರಜ್ಞ, ಸಮಾಜಕ್ಕೆ ಕೊಡಲ್ಪಟ್ಟಂತಹ ರಾಧಾಕೃಷ್ಣ ರಂಥಹವರ ಪರಂಪರೆ ಅವ್ಯಾಹತವಾಗಿ ಅನೂಚಾನವಾಗಿ ಇಂದಿಗೂ ಮುಂದುವರೆದಿದೆ. ಗುರುವಾದವನಿಗೆ ನಾಲ್ಕು ಹಂತಗಳಿವೆ. ಅಧ್ಯಯನ – ಆತ ಅಧ್ಯಯನ ಮಾಡಿರಲೇ ಬೇಕು. ಭೋಧ–ಓದಿದ್ದೆಲ್ಲವನ್ನು ಮನನ ಮಾಡಿ ಬೇರೆಯವರಿಗೂ ಹಂಚಬೇಕು. ಆಚರಣೆ–ಮಾಡುವ ವೃತ್ತಿಯಲ್ಲಿ ಕ್ರಮಬದ್ಧ ಆಚರಣೆ. ಪ್ರಚಾರ– ವಿಚಾರವನ್ನು ತಲುಪಿಸುವುದು. ಇವುಗಳನ್ನೆಲ್ಲ ಸರಿಯಾಗಿ ಯಾರು ಪಾಲಿಸುತ್ತಾರೋ, ವೃತ್ತಿಯಾಗಿ ನಡೆಸುತ್ತಾರೋ ಅವರೇ ಶಿಕ್ಷಕರು. ಗುರುಗಳನ್ನು ದೇವತಾ ಸ್ವರೂಪಕ್ಕೆ ಹೋಲಿಸಿ ಗೌರವಿಸುತ್ತೇವೆ. 'ಗು' ಎಂದರೆ ಅಂಧಕಾರ 'ರು' ಎಂದರೆ ಅಜ್ಞಾನ. ಇವುಗಳನ್ನು ನಿವಾರಣೆ ಮಾಡುವವನು, ತೊಡೆದುಹಾಕುವವನು 'ಗುರು' ಎಂದರ್ಥ. ಹಿಂದೆ ಎಲ್ಲರೂ ಶಿಕ್ಷಕರಿಗೆ, ಆಚಾರ್ಯ, ಉಪಾಧ್ಯಾಯ, ಅಧ್ಯಾಪಕ ಎನ್ನುತ್ತಿದ್ದರು. ಈ ಪ್ರಪಂಚದಲ್ಲಿರುವ ಬೇರೆ ಬೇರೆ ವೃತ್ತಿಯಲ್ಲರುವವರೂ ಸಹ ವ್ಯಕ್ತಿಗಳೂ ಸಹ ಗುರುಗಳಾಗಬಹುದು. ಉದಾಹರಣೆಗೆ ಚಾಣಕ್ಯ, ಚಂದ್ರಗುಪ್ತ ಮೌರ್ಯನಿಗೆ ಗುರುವಾದಂತೆ. ಆದರೆ ಒಂದು ಮಾತಿದೆ. 'ಒಂದಕ್ಷರವ ಕಲಿಸದಾತಂ ಗುರು' ಎಂಬುದಾಗಿ. ತಂದೆ ತಾಯಿ ಅಜ್ಜ ಅಜ್ಜಿ ಮತ್ತಿತರೆಲ್ಲರೂ ಗುರುಗಳೇ. ಹಾಗೆಯೇ ನಮಗೆ ಮಾರ್ಗದರ್ಶನ ಮಾಡುವವರೆಲ್ಲರೂ ಗುರುಗಳೇ ಎಂದರು.

ಮುಖ್ಯ ಅತಿಥಿಗಳಾದ ಶ್ರೀ ಬಿ.ಕೆ. ವೆಂಕಟೇಶಮೂರ್ತಿಯವರು, ಭವ್ಯ ಭಾರತದ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರವೇನು? ಎಂಬ ವಿಷಯದ ಬಗ್ಗೆ ಮಾತನಾಡುತ್ತಾ, ನಮ್ಮ ಇಡೀ ದೇಶದ ಭಾವಿ ಪ್ರಜೆಗಳನ್ನು ನಿರ್ಮಾಣ ಮಾಡುವಂತಹ ಕೆಲಸ ನಮ್ಮದಾಗಿದೆ. ಶಿಕ್ಷಕರ ಕ್ಷೇತ್ರ ಎಂದು ವಿಧಾನ ಪರಿಷತ್‌ನಲ್ಲಿರಬೇಕು ಅಲ್ಲಿ ನಮ್ಮ ಅವಹಾಲಗಳನ್ನು ತಿಳಿಸಬಹುದು. ಆದರೆ ನಾವೀಗ ಸರ್ಕಾರದ ಆದೇಶದ ಮೇಲೆ ಕೆಲಸ ಮಾಡಬೇಕು. ಅಧ್ಯಯನ ಶೀಲತೆ, ನಿಸ್ವಾರ್ಥ ಮನೋಭಾವ, ಸತ್ಯವಂತಿಕೆ, ಸಚ್ಚಾರಿತ್ರ್ಯದ ಸೇವಾ ಮನೋಭಾವ ಹೊಂದಿ, ಕಲಿಸಬೇಕೆಂಬ ಹಂಬಲವಿಟ್ಟುಕೊಂಡಿರಬೇಕು. 1. ತಮಗೆ ವಹಿಸಿದ ಪಾಠ ಮಾಡಲೇಬೇಕು. 2. ಆಧುನಿಕ ಕ್ಷೇತ್ರಕ್ಕೆ ಸಂಭಂಧಿಸಿದ ವಿಷಯಗಳನ್ನು ತಿಳಿಸಲೇಬೇಕು. 3. ಶಾರೀರಿಕವಾಗಿ ಬೆಳೆಯಲು ಪ್ರೋತ್ಸಾಹ ಹಾಗೂ ಪ್ರೇರಣೆ ನೀಡಬೇಕು. 4. ತಾವು ಕಲಿಸಿದುದನ್ನು ಓರೆ ಹಚ್ಚಿ ನೋಡಬೇಕು. ಮಕ್ಕಳಿಗೆ ಅನುಭವನಗಳನ್ನು ಪಡೆಯಲು ಅನುವು ಮಾಡಬೇಕು. ನಡೆ – ನುಡಿ ವಿಚಾರದಲ್ಲಿ ಸಮರ್ಪಕವಾದ ಭವಿಷ್ಯ ನಿರ್ಮಾಣದಲ್ಲಿ ಪೂರಕ ವಿದ್ಯೆ ನೀಡಿ ಆಧುನಿಕತೆಗೆ ಹೊಂದಿಕೊಳ್ಳುವಂತೆ ಮಾಡಬೇಕು. ನಾವು ಏನಾಗಿದ್ದೇವೆ ಎಂಬುದನ್ನು ಮಕ್ಕಳಿಗೆ ತಿಳಿ ಹೇಳಬೇಕು. ಆಧುನಿಕತೆಗೆ ಹೊಂದಿಕೊಳ್ಳಲಾಗದಿದ್ದಲ್ಲಿ ಆಗುವುದಿಲ್ಲ. ನಮ್ಮ ಮಕ್ಕಳಿಗೆ











ನಾವು ಸಮಯ ಕೊಟ್ಟು ತಿಳುವಳಿಕೆ ನೀಡಿದಂತೆ ಅವು ರೂಪುಗೊಳ್ಳುತ್ತವೆ. ಅವರುಗಳಿಗೆ ಸ್ವಚ್ಚತೆ ಬಗ್ಗೆಯೂ ಹೇಳಿಕೊಡಬೇಕು. ಪರಿಸರ ರಕ್ಷಣೆ ಬಗ್ಗೆ ಮಕ್ಕಳಿಗೆ ತಿಳಿಸಬೇಕು. ಸಾಮಾಜಿಕ ಸೇವೆಯಲ್ಲಿ ತೊಡಗಿಕೊಳ್ಳಲು ಎನ್.ಎಸ್.ಎಸ್ ಮತ್ತು ಎನ್.ಸಿ.ಸಿ.ಪೂರಕವಾಗಿ ಕೆಲಸ ಮಾಡುತ್ತಿದೆ ಇದರಿಂದ ಸಮಾಜ ಸೇವೆಯ ಪರಿಕಲ್ಪನೆ ಬರುತ್ತದೆ. ಅವುಗಳಲ್ಲಿಯೂ ಮಕ್ಕಳು ತೊಡಗುವಂತೆ ಮಾಡಬೇಕು. ಇವೆಲ್ಲವುಗಳೆಲ್ಲವನ್ನು ಕಲಿಸಿದ ಗುರುವಿಗೆ ಆತ್ಮ ಸಂತೋಷ ಮತ್ತು ತೃಪ್ತಿ ದೊರಕುತ್ತದೆ. ಜೊತೆಗೆ ರಾಷ್ಟ್ರಪ್ರೇಮದ ವಿಚಾರವನ್ನು ಮಕ್ಕಳಿಗೆ ತಿಳಿಸಿಕೊಡಬೇಕು ರಾಷ್ಟ್ರಾರಾಧನೆ ಆಗಬೇಕು. ರಾಷ್ಟ್ರವನ್ನು ಪ್ರೀತಿಸಬೇಕು. ರಾಷ್ಟ್ರದ ಅಭ್ಯುದಯದ ಬಗ್ಗೆ ಚಿಂತನೆ ಮಾಡಬೇಕು. ಈಗ ಮಾಹಿತಿ ತಂತ್ರಜ್ಞಾನ ಕ್ರಾಂತಿಯಾಗಿ ಬೆಳೆದು ನಿಂತಿದೆ ಅದಿಲ್ಲದೇ ಜೀವನ ಮಾಡಲಸಾಧ್ಯ ಎನಿಸುವಂತಾಗಿದೆ. ಇದು ಒಳ್ಳೆಯದೇ ಜೊತೆಗೆ ಕೆಲವೊಂದು ಉತ್ತಮ ಅಂಶಗಳನ್ನು ತಿಳಿದು ಕೊಳ್ಳಬಹುದಾಗಿದೆ ಎಂದು ವಿವರಿಸಿದರು. ಮಾಹಿತಿ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ವಿಧಾನ ಅರಿಯಬೇಕು. ಇಲ್ಲಿ ಶಿಕ್ಷಕರ ಪಾತ್ರ ಮತ್ತು ಹೊಣೆಗಾರಿಕೆಯ ಬಗ್ಗೆಯೂ ತಿಳಿಸಿ, ಮಗುವಿನ ಮನಸ್ಸನ್ನು ಗೆಲ್ಲುವ ಶಿಕ್ಷಕ ತಾನಾಗಬೇಕು ಹಾಗೂ ಒಳ್ಳೆಯ ಪ್ರಚೋದನಾತ್ಮಕ, ಪ್ರೇರಕಾತ್ಮಕ ವಿಚಾರ ಮಕ್ಕಳಿಗೆ ತುಂಬಿಸಿದರೆ ಒಳ್ಳೆಯ ವ್ಯಕ್ತಿಗಳಾಗಬಹುದು ಎಂದು ತಿಳಿಸಿ, ಎಲ್ಲರಿಗೂ ಶುಭಾಶಯಗಳನ್ನು ತಿಳಿಸಿದರು. ಇದೇ ಸಂದರ್ಭದಲ್ಲಿ ರೊ.ಎಸ್.ಜಿ. ಗೋಪಾಲ್‌ರವರು ಕೇಳಿದ ಪ್ರಶ್ನೆಗೆ ಉತ್ತರಿಸಿದರು.

ಅಧ್ಯಕ್ಷೀಯ ಮಾತುಗಳನ್ನಾಡಿದ ರೊ.ಆನಂದರವರು, ಇಂದಿನ ಮುಖ್ಯ ಅತಿಥಿಗಳು ಶಿಕ್ಷಕರ ನಿಷ್ಠೆಯ ಬಗ್ಗೆಯೂ ಶಿಕ್ಷಕರು ಹೇಗಿರಬೇಕೆಂಬುದರ ಬಗ್ಗೆಯೂ ಮಾತನಾಡಿದ್ದಾರೆ. 'ಕೃಷ್ಣಂ ವಂದೇ ಜಗದ್ಗುರುಂ' ಎಂಬ ಉಕ್ತಿಯಂತೆ ಜಗಕೆ ಕೃಷ್ಣನೊಬ್ಬನೇ ಗುರುವಾಗಿದ್ದಾನೆ. ಗುರುವಿನಲ್ಲಿ ಭಕ್ತಿಯು ನಮ್ಮದಾಗಿರಬೇಕು. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದಿದ್ದಾರೆ ದಾರ್ಶನಿಕರು. ಎಲ್ಲವಕ್ಕೂ ಗುರು ಬೇಕೇ ಬೇಕು. 'ಗುರುವಿಂದ ಬಂಧುಗಳು, ಗುರುವಿಂದ ದೈವಗಳು, ಗುರುವಿಂದಲಿಹುದು ಪುಣ್ಯವದು, ಜಗಕೆಲ್ಲ ಗುರುವಿಂದ ಮುಕ್ತಿ ಸರ್ವಜ್ಞ' ಎಂಬ ಸರ್ವಜ್ಞನ ವಚನವನ್ನು ಉಲ್ಲೇಖಿಸಿದರು. ಮುಖ್ಯ ಅತಿಥಿಗಳು ಬಹಳ ಚೆನ್ನಾಗಿ ವಿಷಯದ ಬಗ್ಗೆ ಮಾತನಾಡಿದ್ದಾರೆ ಎಂದು ತಿಳಿಸಿ ಅವರಿಗೆ ಕೃತಜ್ಞತೆಯನ್ನು ಅರುಹಿ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಕೊನೆಯಲ್ಲಿ ರೊ.ವಿಶ್ವಾಸ್ ಎಲಬುರ್ಗಿಯವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು. ಅಂದಿನ ಸಭೆಗೆ ಉಪಹಾರದ ವ್ಯವಸ್ಥೆ ಮಾಡಿದ ರೊ. ಮಲ್ಲಿಕಾ ವಿ.ಜೋಯ್ಸ್‌ರವರಿಗೂ ಸಹ ವಂದನೆಗಳನ್ನು ತಿಳಿಸಿದರು.







**ನಮ್ಮ ಕ್ಲಬ್‌ಗೆ 2024–25ನೇ ಸಾಲಿಗೆ 21 ಅವಾರ್ಡಗಳು ಬಂದಿದೆ. ಶಿವಮೊಗ್ಗ ವಲಯದಲ್ಲಿ ಎರಡನೇ ಸ್ಥಾನ ಹಾಗೂ ಕ್ಲಬ್ ಎಕ್ಸಲೆನ್ಸ್ ಅವಾರ್ಡ್ ಸರ್ಟಿಫಿಕೇಟ್ಸ್ ಬಂದಿರುತ್ತದೆ.**

## THE OBJECT OF ROTARY

The Object of Rotary is to encourage and foster the ideals of service as a basis of worthy enterprise and in particular, to encourage and foster:

**01 FIRST**
The development of acquaintance as an opportunity for service;

**02 SECOND**
High ethical standards in business and professions; the recognition of the worthiness of all useful occupations; and the dignifying of each Rotarian's occupation as an opportunity to serve society;

**03 THIRD**
The application of the ideal of service in each Rotarian's personal, business/professional, and community life;

**04 FOURTH**
The advancement of international understanding, goodwill, and peace through a world fellowship of business and professional persons united in the ideal of service.